ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ
ನಂ.2 ಉತ್ತರ ಉಪವಿಭಾಗ.
ಬೆಂಗಳೂರು, ದಿನಾಂಕ: 27/10/2022

Email ID:nsdpwdl@gmail.com
Ph: 080-27682598

ಸಂಖ್ಯೆ:ಸಕಾಇಂ/ಲೋಇ/ಉವಿ/ನಂ.2 ಉತ್ತರ//2022-23/640

ರವರಿಗೆ,

**President**
**K.K.Educational trust**
**New Hardwick Indian School**
**52/8 Kodigehalli post Magadi main road**
**Bangalore-560091**

ಮಾನ್ಯರೇ,

**ವಿಷಯ:–** **K.K.Eductional trust New Hardwick Indian School 52/8 Kodigehalli Post Magadi main road Bangalore-560091 " ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.**

**ಉಲ್ಲೇಖ:–**

1. **ಸರ್ಕಾರದ ಸುತೋಲೆ ಸಂ: ಲೋಇ 59 ಬಿಇಡಿ 2019**
2. President, K.K. Educational trust New hardwick Indian school 52/8 Kodigehalli post Magadi main road Bangalore **ರವರ ಪತ್ರ**

   **ದಿನಾಂಕ:–** 13.10.2022

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳಲ್ಲಿ President K.K.Eductional trust New Hardwick Indian School, 52/8 Kodigehalli post Magadi main road, Bangalore ರವರ ವತಿಯಿಂದ ನಿರ್ಮಾಣ ಮಾಡಲಾಗಿರುವ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಕೋರಲಾಗಿರುತ್ತದೆ.

ಸರ್ಕಾರದ ಸುತೋಲೆ ಸಂ: ಲೋಇ 59 ಬಿಇಡಿ 2019 ದಿ: 06–05–2022 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಇ ರವರಿಗೆ ಶಾಲಾ/ ಕಾಲೇಜು ಕಟ್ಟಡಗಳನ್ನು ಪರಿಶೀಲಿಸಿ Structural Stability ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲು ಅಧಿಕಾರ ಪ್ರತ್ಯಾಯೋಜನೆಗೊಳಿಸಿ ಸೂಚಿಸಿರುವುದರಿಂದ ಪ್ರಸ್ತಾಪಿತ ಕಟ್ಟಡಕ್ಕೆ ವರದಿ ನೀಡಲಾಗಿದೆ.

ತತ್ಸಂಭಂಧವಾಗಿ ಸದರಿ ಕಟ್ಟಡವನ್ನು ದಿನಾಂಕ:–19.10.2022 ರಂದು ಈ ಉಪವಿಭಾಗದ ತಾಂತ್ರಿಕ ಸಿಬ್ಬಂದಿ ಹಾಗೂ Er. Mohan. M, B.E(Civil)M.E.(Highways), M.I.R.C.M.I.S.C.A, Managing Director (Technical) M/s Hencon Associates, Bangalore ನ ತಾಂತ್ರಿಕ ತಂಡ ಹಾಗೂ ಸದರಿ ಸಂಸ್ಥೆಯ ನೊಂದಾಯಿತ ಸ್ಟ್ರಕ್ಚರಲ್ ಇಂಜಿನಿಯರ್ ರವರ ಉಪಸ್ಥಿತಿಯಲ್ಲಿ ಪರಿವೀಕ್ಷಣೆ ನಡೆಸಲಾಗಿದ್ದು ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ.

ಶಾಲಾ ಕಟ್ಟಡವನ್ನು ನೆಲಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಯನ್ನು ಒಳಗೊಂಡಿದ್ದು ಮುಂಭಾಗದ ಕಟ್ಟಡವು ಹೊಸ ಕಟ್ಟಡವಾಗಿದ್ದು, ಹಿಂಭಾಗದಲ್ಲಿರುವ ಕಟ್ಟಡವು ಸುಮಾರು 10 ವರ್ಷದ ಹಿಂದಿನ ಕಟ್ಟಡವಾಗಿರುತ್ತದೆ. ಸದರಿ ಕಟ್ಟಡದಲ್ಲಿ ತರಗತಿ ಕೋಣೆಗಳು, ಆಡಳಿತ ಕಛೇರಿ, ಮೆಟ್ಟಿಲುಕೋಣೆ, ಬಾಲಕಿಯರ ಮತ್ತು ಬಾಲಕರ ಶೌಚಾಲಯ ಗಳನ್ನು ಒಳಗೊಂಡಿರುತ್ತದೆ.

ಮುಂದುವರೆದು, ಕಟ್ಟಡದ ಧೃಡತೆಗೆ ಸಂಬಂಧಿಸಿದಂತೆ, ಸರ್ಕಾರದ ಸುತೋಲೆ ಸಂ: ಲೋಇ 59 ಬಿಇಡಿ 2019 ದಿ:06-05-2022 ರಲ್ಲಿ ತಿಳಿಸಿರುವಂತೆ ನೋಂದಾಯಿತ ಸಂಸ್ಥೆಯವರ ಸಹಯೋಗದೊಂದಿಗೆ ಎರಡು ರೀತಿಯ Non Distractive Test ಗಳನ್ನು Hencon Associates ರವರ ವತಿಯಿಂದ ದಿ: 19-10-2022 ರಂದು ಕೈಗೊಳ್ಳಲಾಗಿದ್ದು ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡು ಬಂದಿರುತ್ತದೆ ಮತ್ತು ಫಲಿತಾಂಶಗಳು ತೃಪ್ತಿಕರವಾಗಿರುತ್ತದೆಯೆಂದು ವರದಿಯಲ್ಲಿ ತಿಳಿಸಲಾಗಿರುತ್ತದೆ.

ಸಂಸ್ಥೆಯವರು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

- ಕೊಡಿಗೇಹಳ್ಳಿ ಗ್ರಾಮ ಪಂಚಾಯತಿ, ಯಶವಂತಪುರ ಹೋಬಳಿ ಬೆಂಗಳೂರು ಉತ್ತರ ತಾಲ್ಲೂಕು ರವರು ನೀಡಿರುವ ನಕ್ಷೆಯ ಪ್ರತಿ.
- ಸದರಿ ಕಟ್ಟಡವನ್ನು Mohan. M, B.E (Civil) M.E.(Highways), M.I.R.C.M.I.S.C.A, Managing Director (Technical) M/s Hencon Associates, Bangalore ರವರು ಕಟ್ಟಡದ Structural safety ಬಗ್ಗೆ ನೀಡಿರುವ ಪ್ರಮಾಣ ಪತ್ರ.

ಷರಾ: ಕಟ್ಟಡದಲ್ಲಿ ಈ ಕೆಳಕಂಡ ಕೆಲಸಗಳನ್ನು ಕೈಗೊಳ್ಳಲು ಸಂಸ್ಥೆಯವರಿಗೆ ಸೂಚಿಸಲಾಗಿದೆ.

- ಕಿಟಕಿಗಳಿಗೆ ಗ್ರಿಲ್‌ಗಳನ್ನು ಅಳವಡಿಸುವ ಕಾಮಗಾರಿ ಕೈಗೊಳ್ಳಲು ಸೂಚಿಸಲಾಗಿದೆ.
- ಪ್ಯಾಸೇಜ್‌ನಲ್ಲಿರುವ ರೈಲಿಂಗ್ಸ್‌ನ ಕಂಬಿಗಳ ಅಂತರ ಹೆಚ್ಚಿದ್ದು, ಪಾಲಿಕಾರ್ಬನ್ ಷೀಟ್ ಅಥವಾ ಕಂಬಿಗಳನ್ನು ಅಳವಡಿಸಲು ಸೂಚಿಸಲಾಗಿದೆ.
- Any modifications, Additions & Alterations must be carried out under strict technicall guidance and supervision.
- The designs should be got checked for safe positioning of over head water tanks in the trace floor

ಮುಂದುವರೆದು ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯನ್ವಯ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ನಿಗಧಿಪಡಿಸಿರುವ ಶುಲ್ಕ ಒಟ್ಟು ರೂ. 5000/- (ರೂ. ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಡಿ.ಡಿ. ಮುಖೇನ ಸಹಾಯಕ ಕಾರ್ಯಪಾಲಕ ಅಭಿಯಂತರರರು, ಲೋಇ ನಂ.2 ಉತ್ತರ ಉಪವಿಭಾಗ, ಬೆಂಗಳೂರು ರವರ ಹೆಸರಿನಲ್ಲಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕೊಡಿಗೇಹಳ್ಳಿ ಡಿಡಿ ಸಂಖ್ಯೆ 31503 ದಿ: 21-10-2022 ರಲ್ಲಿ ಪಾವತಿಸಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ Mohan. M, B.E(Civil)M.E.(Highways), M.I.R.C.M.I.S.C.A, Managing Director (Technical) M/s Hencon Associates, Bangalore ರವರು ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ಈ ಉಪವಿಭಾಗದ ತಾಂತ್ರಿಕ ತಂಡವು ಪರಿಶೀಲಿಸಲಾಗಿ ಕಟ್ಟಡವು "Structurally Stable" ಇರುವುದಾಗಿ ಪರೀಕ್ಷಾ ವರದಿಗಳಿಂದ ಕಂಡುಬಂದಿರುವುದರಿಂದ ಸದರಿ ಕಟ್ಟಡವು "Structurally Stable" ಇದೆ ಎಂದು ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

ತಮ್ಮ ವಿಶ್ವಾಸಿ,

27/10/22

ಸಹಾಯಕ ಕಾರ್ಯಪಾಲಕ ಅಭಿಯಂತರರು,
ಲೋ.ಇ. ನಂ.2 ಉತ್ತರ ಉಪ ವಿಭಾಗ,
ಬೆಂಗಳೂರು